# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶುಕ್ರವಾರ, ಫೆಬ್ರವರಿ 03, 2023


ಸಂಪುಟ : 49 ಸಂಚಿಕೆ : 262 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




## ಕೊಂಡಜ್ಜಿ ಕೆರೆಯಲ್ಲಿ ಪಟ್ಟೆ ತಲೆ ಹೆಬ್ಬಾತುಗಳು

ದಾವಣಗೆರೆ ಸಮೀಪದ ಕೊಂಡಜ್ಜಿ ಕೆರೆಯಲ್ಲಿ ಪಟ್ಟೆ ತಲೆ ಹೆಬ್ಬಾತು (ಬಾರ್ ಹೆಡೆಡ್ ಗೂಸ್) ಗಳು ವಿಹರಿಸುತ್ತಿರುವ ದೃಶ್ಯವಿದು. ಶುದ್ಧ ಸಸ್ಯಹಾರಿ ಹಕ್ಕಿಯಾಗಿರುವ ಇವು, ಕೆರೆ ದಡದಲ್ಲಿ ವಾಸವಾಗುವ ಹಕ್ಕಿಗಳು. ಸಾಮಾನ್ಯವಾಗಿ ನವೆಂಬರ್ ತಿಂಗಳ ಕೊನೆಯಲ್ಲಿ ಮಂಗೋಲಿಯಾದಿಂದ ವಲಸೆ ಬಂದಿರುತ್ತವೆ.

# ನೈತಿಕ ಶಿಕ್ಷಣದಿಂದ ಸ್ವಾವಲಂಬಿ ಮಾನಸಿಕತೆ



ಕೊಟ್ಟೂರು, ಫೆ. 2 – ಭಾರತವನ್ನು ಲೂಟಿ ಮಾಡಲು ಸ್ವಾವಲಂಬಿ ಗ್ರಾಮಗಳ ವ್ಯವಸ್ಥೆಯನ್ನು ಬ್ರಿಟಿಷರು ಬದಲಾಯಿಸಿದರು. ಮೆಕಾಲೆ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದರು. ಅದರ ಪರಿಣಾಮಗಳನ್ನು ಈಗ ನೋಡುತ್ತಿದ್ದೇವೆ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ಕೊಟ್ಟೂರಿನಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಆರನೇ ದಿನದಂದು ಆಯೋಜಿಸಲಾಗಿದ್ದ ಯುವ ಚಿಂತನ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಕ್ಕಳಿಗೆ ನೈತಿಕ ಶಿಕ್ಷಣದ ಅಗತ್ಯವಿರುವ ಬಗ್ಗೆ ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದರು. ನೂತನ ಶಿಕ್ಷಣ ನೀತಿಯಲ್ಲಿ ಈ ಆಶಯ ಜಾರಿಗೆ ಬರುತ್ತಿದೆ. ಮಕ್ಕಳಿಗೆ ಮೌಲ್ಯಾಧರಿತ ಹಾಗೂ ನೈತಿಕ ಶಿಕ್ಷಣ ನೀಡುವ ಮೂಲಕ ಸ್ವಾವಲಂಬಿ ಮಾನಸಿಕತೆ ತರುವ ಶಿಕ್ಷಣ ಒದಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದವರು ಹೇಳಿದರು.

ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆ ತರುತ್ತೇವೆ. ಯುವಕರಿಗೆ ಪ್ರೇರಣೆ ಕೊಟ್ಟು ಸಮಾಜವನ್ನು ಪ್ರೀತಿಸುವ ಯುವಕರನ್ನಾಗಿ ಮಾಡುವ ಶಿಕ್ಷಣ ತರಲಾಗುವುದು ಎಂದವರು ತಿಳಿಸಿದರು.

ಸಮಾರಂಭದಲ್ಲಿ ಆಶೀರ್ವಚನ ನೀಡಿದ ಆದಿಚುಂಚನಗಿರಿ ಮಠದ ಜಗದ್ಗುರು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮನಸ್ಸು ಕೆಟ್ಟರೆ ಎಷ್ಟೇ ಉತ್ತಮ ದೇಹವಿದ್ದರೂ ಕೆಲಸಕ್ಕೆ ಬಾರದು. ದೇಹವನ್ನು ಸರಿಯಾಗಿ ಬಳಸಲು ಮನಸ್ಸು ಮೊದಲು ಸರಿ ಇರಬೇಕು. ಮನಸ್ಸನ್ನು ಪಳಗಿಸಿಕೊಳ್ಳುವ ಕಲೆ ಗೊತ್ತಾದಾಗ ಜೀವನವನ್ನು ಕಟ್ಟಿಕೊಳ್ಳಬಹುದು ಎಂದು ಹೇಳಿದರು.

ವಿಜ್ಞಾನ ಎಷ್ಟೇ ಬೆಳೆದರೂ ಮನುಷ್ಯನ ಹೃದಯದಲ್ಲಿನ ಕುತ್ಸಿತ ಮಲಿನ ಭಾವವನ್ನು ಬದಲಿಸಲು ಸಾಧ್ಯವಿಲ್ಲ. ಇದು ಬದಲಾಗಬೇಕಾದರೆ ಅಂತರ್ಯದಲ್ಲಿನ ದಿವ್ಯತೆಯ ಅರಿವಾಗಬೇಕು. ದಿವ್ಯತೆಯ ಅರಿವಾದವರು ತಮ್ಮ ಬದುಕಿನ ಸಮಸ್ಯೆಗಳಿಗೆ ತಾವೇ ಪರಿಹಾರ ಕಂಡುಕೊಳ್ಳುತ್ತಾರೆ ಎಂದವರು ತಿಳಿಸಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ಈ ಹಿಂದೆ ಸಂಪರ್ಕ (4ನೇ ಪುಟಕ್ಕೆ)

### ನೈತಿಕ ಶಿಕ್ಷಣ ಎಲ್ಲರಿಗೂ ಬೇಕು



ನೈತಿಕ ಶಿಕ್ಷಣ ಕೇವಲ ಶಾಲಾ ಮಕ್ಕಳಿಗಷ್ಟೇ ಸೀಮಿತ ಅಲ್ಲ. ತಂದೆ - ತಾಯಿ, ಶಿಕ್ಷಕರು, ರಾಜಕಾರಣಿಗಳೂ ಸೇರಿದಂತೆ ಎಲ್ಲರಿಗೂ ನೈತಿಕ ಶಿಕ್ಷಣದ ಅಗತ್ಯವಿದೆ ಎಂದು ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು. ಮಕ್ಕಳು ತಮ್ಮ ಕುಟುಂಬದವರನ್ನು ಅನುಸರಿಸುತ್ತಾರೆ. ಹೀಗಾಗಿ ತಂದೆ - ತಾಯಿ ಗಳು ಯಾವುದೇ ಕಾರಣಕ್ಕೂ ಮಕ್ಕಳ ಮುಂದೆ ತಪ್ಪು ಮಾಡಬಾರದು ಎಂದು ಶ್ರೀಗಳು ಕಿವಿಮಾತು ಹೇಳಿದರು.

# ಅದಾನಿ ಸಮೂಹದ ವಿರುದ್ಧ ತನಿಖೆ

## ಪ್ರತಿಪಕ್ಷಗಳಿಂದ ಗದ್ದಲ, ಸಂಸತ್ ಕಲಾಪ ಮುಂದೂಡಿಕೆ

ನವದೆಹಲಿ, ಫೆ. 2 – ಅದಾನಿ ಸಮೂಹದ ವಿರುದ್ಧ ಕೇಳಿ ಬರುತ್ತಿರುವ ಆರೋಪಗಳ ಬಗ್ಗೆ ಜಂಟಿ ಸಂಸದೀಯ ಸಮಿತಿ ಇಲ್ಲವೇ ಸುಪ್ರೀಂ ಕೋರ್ಟ್ ಉಸ್ತುವಾರಿಯ ಮೂಲಕ ತನಿಖೆ ನಡೆಸುವಂತೆ ಪ್ರತಿಪಕ್ಷಗಳು ಸಂಸತ್ತಿನಲ್ಲಿ ಗದ್ದಲ ನಡೆಸಿವೆ. ಇದರಿಂದಾಗಿ ಉಭಯ ಸದನಗಳ ಕಲಾಪವನ್ನು ಒಂದು ದಿನ ಮುಂದೂಡಲಾಯಿತು.

ಕಲಾಪಗಳು ಆರಂಭವಾದ ತಕ್ಷಣ ಕಾಂಗ್ರೆಸ್ ನೇತೃತ್ವದಲ್ಲಿ ಪ್ರತಿಪಕ್ಷಗಳು ಸಂಘಟಿತವಾಗಿ ತನಿಖೆಗೆ ಒತ್ತಾಯಿಸಿದವು. ಈ ಬೇಡಿಕೆಗೆ ಒಪ್ಪದಿದ್ದಾಗ ಪ್ರತಿಪಕ್ಷಗಳು ಗದ್ದಲ ನಡೆಸಿದವು. ನಂತರ ಕಲಾಪ ಮುಂದೂಡಲಾಯಿತು.

**ವಿವರ ಕೇಳಿದ ಆರ್.ಬಿ.ಐ. :** ಅದಾನಿ ಸಮೂಹಕ್ಕೆ ಬ್ಯಾಂಕುಗಳು ನೀಡಿರುವ ಸಾಲಗಳ ಬಗ್ಗೆ ರಿಸರ್ವ್ ಬ್ಯಾಂಕ್ ವಿವರ ಕೇಳಿದೆ ಎಂದು ಮೂಲಗಳು ತಿಳಿಸಿವೆ. ಅದಾನಿ ಎಂಟರ್‌ಪ್ರೈಸಸ್ 20,000 ಕೋಟಿ ರೂ.ಗಳ ಎಫ್.ಪಿ.ಒ. ವಾಪಸ್ ಪಡೆದ ನಂತರ ಈ ಬೆಳವಣಿಗೆಯಾಗಿದೆ.

**ಎಫ್.ಪಿ.ಒ. ವಾಪಸಾತಿಗೆ ಸಮರ್ಥನೆ :** ಷೇರು ಪೇಟೆಯಲ್ಲಿ ತೀವ್ರ ಕುಸಿತ ಎದುರಾದ ನಂತರ ಮೊದಲ ಬಾರಿಗೆ ಹೇಳಿಕೆ ನೀಡಿರುವ ಅದಾನಿ ಸಮೂಹದ ಮುಖ್ಯಸ್ಥ ಗೌತಮ್ ಅದಾನಿ, ಮಾರುಕಟ್ಟೆಯ ವೈಪರೀತ್ಯದ ಕಾರಣದಿಂದಾಗಿ ಎಫ್.ಪಿ.ಒ.ದಲ್ಲಿ ಮುಂದುವರೆಯುವುದು ನೈತಿಕವಾಗಿ ಸರಿಯಲ್ಲ ಎಂದು ನಿರ್ದೇಶಕರ ಮಂಡಳಿ ತೀರ್ಮಾನಿಸಿತು ಎಂದಿದ್ದಾರೆ. (4ನೇ ಪುಟಕ್ಕೆ)

# ದೇವಸ್ಥಾನಗಳು ಮೌಢ್ಯ, ಕಂದಾಚಾರಗಳನ್ನು ಬಿತ್ತಬಾರದು

## ಸುಂಕದಕಟ್ಟೆ ಗ್ರಾಮದ ದೇವಸ್ಥಾನದ ರಾಜಗೋಪುರದ ಕಳಸಾರೋಹಣದಲ್ಲಿ ಕುಂಚಿಟಿಗ ಶ್ರೀ



ಹೊನ್ನಾಳಿ, ಫೆ.2- ದೇವಸ್ಥಾನಗಳು ಮೌಢ್ಯ, ಕಂದಾಚಾರಗಳನ್ನು ಬಿತ್ತಬಾರದು. ಜನರಲ್ಲಿ ವೈಚಾರಿಕತೆ ಬೆಳೆಸುವಂತಾಗಬೇಕು. ಸಾಂಸ್ಕೃತಿಕ ವಾತಾವರಣ ಇರಬೇಕು ಎಂದು ಹೊಸದುರ್ಗದ ಅಖಿಲ ಕುಂಚಿಟಿಗ ಮಹಾಸಂಸ್ಥಾನ ಮಠದ ಶ್ರೀ ಡಾ. ಶಾಂತವೀರ ಸ್ವಾಮೀಜಿ ಹೇಳಿದರು.

ಗುರುವಾರ ತಾಲ್ಲೂಕಿನ ಸುಂಕದಕಟ್ಟೆ ಗ್ರಾಮದ ಶ್ರೀ ಮಂಜುನಾಥ ಸ್ವಾಮಿ, ಶ್ರೀ ನರಸಿಂಹ ಸ್ವಾಮಿ ದೇವಸ್ಥಾನದ ರಾಜ ಗೋಪುರದ ಕಳಸಾರೋಹಣ ಕಾರ್ಯಕ್ರಮ ನೆರವೇರಿಸಿ, ಬಳಿಕ ನಡೆದ ಧರ್ಮಸಭೆಯಲ್ಲಿ ಅವರು ಮಾತನಾಡಿದರು.

ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿದರೆ ಅದೇ ಸಾರ್ಥಕತೆ. ದೇವಸ್ಥಾನಗಳ ಕಳಸಗಳು ಹೇಗೆ ಮೆರುಗು ನೀಡುತ್ತವೋ ಅದೇ ರೀತಿ ಮನೆಯಲ್ಲಿ ಉತ್ತಮ ಶಿಕ್ಷಣ ಪಡೆದ ಓರ್ವ ವ್ಯಕ್ತಿ ಇಡೀ ಮನೆತನಕ್ಕೆ ಬೆಳಕಾ ಗುತ್ತಾನೆ. ದೇವಸ್ಥಾನದ ರಾಜಗೋಪುರದ ಕಳಸದಂತೆ ಕುಟುಂಬಕ್ಕೆ ಮೆರುಗು ನೀಡುತ್ತಾನೆ. ಆದ್ದರಿಂದ, ಎಲ್ಲರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ತಿಳಿಸಿದರು.

ದೇವಸ್ಥಾನದಲ್ಲಿ ಜಾತಿ, ಪಂಗಡ ಬಂದರೆ ನೀತಿ ಮಾಯವಾಗುತ್ತದೆ. ದೇವರಿಗೆ ಯಾವುದೇ ಭೇದವಿಲ್ಲ. ಮೇಲು ಜಾತಿ, ಕೀಳು ಜಾತಿ ಎಂಬ ಭೇದ-ಭಾವವನ್ನು (4ನೇ ಪುಟಕ್ಕೆ)

# ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಗೆ ನಾಯಕರ ಚರ್ಚೆ

ಬೆಂಗಳೂರು, ಫೆ. 2- ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ನಗರದ ಹೊರವಲಯದ ರೆಸಾರ್ಟ್‌ನಲ್ಲಿ ರಾಜ್ಯ ನಾಯಕರು ಸುದೀರ್ಘ ಚರ್ಚೆ ನಡೆಸಿದರು. ರಾಜ್ಯದ 224 ವಿಧಾನ ಸಭಾ ಕ್ಷೇತ್ರಗಳ ಪೈಕಿ 130 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮ ಗೊಳಿಸಲು ಇಂದು ಸಭೆ ನಡೆಸಲಾಯಿತು.

ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಮಾರ್, ವಿಧಾನ ಮಂಡಲದ ಪ್ರತಿ ಪಕ್ಷದ ನಾಯಕರಾದ ಸಿದ್ದರಾಮಯ್ಯ, ಬಿ.ಕೆ. ಹರಿಪ್ರಸಾದ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್ ಸೇರಿದಂತೆ ಹಿರಿಯ ನಾಯಕರು ಪ್ರತಿ ಜಿಲ್ಲೆಯ ಆಕಾಂಕ್ಷಿಗಳ ಜೊತೆ ಚರ್ಚೆ ಮಾಡಿ ಹೆಸರುಗಳನ್ನು ಶಿಫಾರಸ್ಸು ಮಾಡಿರುವ ಪಕ್ಷದ ಕಾರ್ಯದರ್ಶಿಗಳು ಹಾಗೂ ಚುನಾವಣಾ ಸಮಿತಿ ಸದಸ್ಯರೊಟ್ಟಿಗೆ ನಿರಂತರ ಚರ್ಚೆ ನಡೆಸಿದರು. ವೀಕ್ಷಕರಿಂದ (4ನೇ ಪುಟಕ್ಕೆ)

# ಮೊಬೈಲ್ ಅಪ್ಡೇಟ್ ಆಗದೇ ವಾಹನ ದಂಡದ ಮಾಹಿತಿ ದೂರ

ದಾವಣಗೆರೆ, ಫೆ. 2- ಸಾರ್ಜನಿಕರ ವಾಹನಗಳು



ಸಂಚಾರಿ ನಿಯಮಗಳನ್ನು ಉಲ್ಲಂಘಿಸಿದಾಗ, ಆ ಬಗ್ಗೆ ಮಾಲೀಕರಿಗೆ ಮೊಬೈಲ್ ಮೂಲಕ ಮಾಹಿತಿ ನೀಡಲು ಸರ್ಕಾರ ವ್ಯವಸ್ಥೆ ರೂಪಿಸಿದೆ. ಆದರೆ, ಸಾಕಷ್ಟು ಜನರು ಈ ಸೇವೆ ಪಡೆದುಕೊಳ್ಳುತ್ತಿಲ್ಲ. ವಾಹನಗಳ ನೋಂದಣಿ ವೇಳೆ ಮಾಲೀಕರಿಂದ (4ನೇ ಪುಟಕ್ಕೆ)


## SHREEDA COLLECTIONS
### ON FEB-03RD & 04TH

Saree enthusiasts of the city are in for a treat to usher in auspicious- ness with Shreeda Collections at Southern Star on Feb-03rd & 04th.

Take your pick from carefully curated drapes that have been sourced from across the length and breadth of the country, to create one of a kind elegance. The exquisite sarees mirror the excellence in detail of Indian craftsmanship, while drawing inspiration from the vast and diverse craft traditions of India. This season's favourite pick would be Gadwal Sarees, which are an uniquely hand-crafted woven sarees from the Telan- gana State. They are famous for the Zari on the sarees. The weave is so light that the saree can be packed in a matchbox. Shreeda offers this gorgeous weave with big Kanchi borders, Kalamkari on Gadwals which are sure to take your breath away.





Indulge in a wide array of regal Benaras Silks, Chiffons, Georgettes, Chinia Silks, Muga Sarees, Block Printed Tussar silks and more to ensure you are the cynosure of all eyes, whatever the occasion. Shree-da also showcases a distinctive and striking range of sarees with antique zari on Benaras Silk, Khadhi and Georgette.

Also stealing the limelight are the richly woven vibrant Kanchipuram silks with traditional motifs. The sarees that have truly been hand-picked are sure to leave you mesmerised. The plethora of choices effortlessly merge traditional splendour with modern day elegance. The exclusive saree is indeed the ultimate destination for exclusive silks and handlooms that are stunning yet affordable.

To up your style quotient for the special occasion, Impressionz is back to showcase the new collection on Feb-03rd & 04th at the Hotel southern star Davengere. From 11am to 8 pm.



## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ಡಾ|| ಶಾಮನೂರು ಶಿವಶಂಕರಪ್ಪನವರು
ಶಾಸಕರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ಇವರು ಮಾಡುವ ವಿಜ್ಞಾಪನೆಗಳು.
ಆತ್ಮಿಯರೇ, ದಿನಾಂಕ 30-01-2023 ನೇ ಸೋಮವಾರ ರಾತ್ರಿ 11-30 ಕ್ಕೆ
ನನ್ನ ಚಿಕ್ಕಪ್ಪನವರಾದ ಶ್ರೀ ದಿ|| ಶಾಮನೂರು ಶಿವಪ್ಪ ಇವರ ಜೇಷ್ಠ ಪುತ್ರ





ಜನನ : 12-02-1945
ನಿಧನ : 30-01-2023

ಶ್ರೀ ಎಸ್. ಎಸ್. ಜಯಣ್ಣನವರು
ಆಡಳಿತ ಮಂಡಳಿ ಸದಸ್ಯರು, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ.
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ 03-02-2023ನೇ ಶುಕ್ರವಾರ ಬೆಳಗ್ಗೆ 10–30 ಕ್ಕೆ
'ಮೃತರ ಸ್ವಗೃಹ' ಎಲ್.ಐ.ಸಿ. ಆಫೀಸ್ ಹಿಂಭಾಗ, ಕೆ.ಆರ್. ರಸ್ತೆ, ದಾವಣಗೆರೆಯಲ್ಲಿ
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು

ಡಾ|| ಶಾಮನೂರು ಶಿವಶಂಕರಪ್ಪ ಮತ್ತು ಮಕ್ಕಳು
ಸಹೋದರಿ : ಶ್ರೀಮತಿ ಅನ್ನಪೂರ್ಣ ನಾಗರಾಜ್
ಪುತ್ರರು : ✦ ಎಸ್.ಜೆ. ಅರುಣ್‌ಕುಮಾರ್ ✦ ಎಸ್.ಜೆ. ಶಂಕರ್ ✦ ಎಸ್.ಜೆ. ಶರತ್
ಪುತ್ರಿಯರು : ✦ ಶ್ರೀಮತಿ ಅನಿತಾ, ರಾಜು ಜಿ.ಎಸ್. ✦ ಶ್ರೀಮತಿ ಮಂಜುಳ, ಡಾ|| ಪ್ರಭು ಮತ್ತು
ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಶಾಮನೂರು ವಂಶಸ್ಥರು ಮತ್ತು ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.



## ಭಾವಪೂರ್ಣ ಶ್ರದ್ಧಾಂಜಲಿ

ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿಯ ಸದಸ್ಯರೂ,
ನಮ್ಮ ಮಾರ್ಗದರ್ಶಕರೂ ಆಗಿದ್ದ
ಶ್ರೀಯುತ ಎಸ್. ಎಸ್. ಜಯಣ್ಣ
ಅವರು ದಿನಾಂಕ 30-01-2023 ನೇ ಸೋಮವಾರ
ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಹಾಗೂ
ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ
ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

✦ ಕಿತ್ತೂರು ಜಯಣ್ಣ ಮತ್ತು ಮಕ್ಕಳು
ಅಕ್ಕಿ ವ್ಯಾಪಾರಿಗಳು
✦ ಹಾಲಪ್ಪ ಹುಲಿಕಟ್ಟೆ, ನಿವೃತ್ತ ಪೊಲೀಸ್
✦ ಶಶಿಕುಮಾರ್




# ಕುಲಕಸುಬಿನ ಜೊತೆಗೆ ಶಿಕ್ಷಿತರಾದರೆ ಅಭಿವೃದ್ಧಿ ಸಾಧ್ಯ



## ಹರಪನಹಳ್ಳಿ ತಾ.ಪಂ. ಸಾಮರ್ಥ್ಯ ಸೌಧದಲ್ಲಿ ನಡೆದ ಮಡಿವಾಳ ಮಾಚಿದೇವರ ಜಯಂತ್ಯೋತ್ಸವದಲ್ಲಿ ಜಿ. ಕರುಣಾಕರ ರೆಡ್ಡಿ

ಹರಪನಹಳ್ಳಿ, ಫೆ. 2- ಮಡಿವಾಳ ಸಮಾಜ ತಮ್ಮ ಕುಲಕಸುಬಿನ ಜೊತೆಗೆ ಶಿಕ್ಷಣವಂತರಾದರೆ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಶಾಸಕ ಜಿ. ಕರುಣಾಕರ ರೆಡ್ಡಿ ಹೇಳಿದರು.

ಪಟ್ಟಣದ ತಾ.ಪಂ. ಸಾಮರ್ಥ್ಯಸೌಧದಲ್ಲಿ ತಾಲ್ಲೂಕು ಆಡಳಿತದಿಂದ ಆಯೋಜಿಸಿದ್ದ ಮಡಿವಾಳ ಮಾಚಿದೇವರ ಜಯಂತ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಡಿವಾಳ ಸಮಾಜವು ತನ್ನ ಕುಲಕಸುಬಿನ ಮೂಲಕ ಜೀವನ ನಡೆಸಬೇಕಾಗಿಲ್ಲ. ಶಿಕ್ಷಣ ಬದಲಾವಣೆಯಿಂದ ಸಮುದಾಯ ಮೇಲೆ ಬ ರಲು ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೊಳಿಸುತ್ತಿದ್ದು, ಅವುಗಳನ್ನು ಸದುಪಯೋಗ ಮಾಡಿಕೊಳ್ಳುವ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮುಂದೆ ಬರಬೇಕು ಎಂದು ಹೇಳಿದರು.

ಮನುಷ್ಯ ಪುರಸ್ಕಾರ ಗುಣವನ್ನು ರೂಢಿಸಿಕೊಳ್ಳಬೇಕು. ಕೆಟ್ಟದ್ದಕ್ಕೆ ತಾತ್ಕಾಲಿಕ ಸುಖ ಸಿಗುತ್ತದೆ. ಉತ್ತಮ ಕೆಲಸಗಳಿಗೆ ನೆಮ್ಮದಿ ಸಿಗುತ್ತದೆ ಎಂದ ಅವರು, ನಾನು ಮಡಿವಾಳ ಸಮಾಜವನ್ನು ಎಸ್ಸಿಗೆ ಸೇರಿಸಲು ಮುಖ್ಯಮಂತ್ರಿಗಳ ಬಳಿ ಧ್ವನಿ ಎತ್ತುವೆ ಎಂದರು.

ಉಪವಿಭಾಗಾಧಿಕಾರಿ ಟಿ.ವಿ. ಪ್ರಕಾಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಾಚಿದೇವರು 12ನೇ ಶತಮಾನದ ಶರಣರು ಹಾಗೂ ಸಂತರ ಸಮಕಾಲೀನರಾಗಿದ್ದು, ತಮ್ಮ ಕಾಯಕದೊಂದಿಗೆ ವಚನಗಳ ಮೂಲಕ ಗುರುತಿಸಿಕೊಂಡು ತಮ್ಮದೇ ಆದ ಕೊಡುಗೆಯನ್ನು ಸಮಾಜಕ್ಕೆ ನೀಡಿದ್ದು, ಅವರನ್ನು ಸ್ಮರಿಸೋಣ ಎಂದರು.

ಪುರಸಭೆ ಅಧ್ಯಕ್ಷ ಹೆಚ್.ಎಂ. ಅಶೋಕ್ ಮಾತನಾಡಿ, ದೇಶದ 18 ರಾಜ್ಯಗಳಲ್ಲಿ ಮಾಡಿವಾಳ ಸಮಾಜವು ಪರಿಶಿಷ್ಟ ಜಾತಿ ಪಟ್ಟಿಯಲ್ಲಿದ್ದು, ಇನ್ನು 12 ರಾಜ್ಯಗಳಲ್ಲಿ ಹಿಂದುಳಿದ ವರ್ಗದಲ್ಲಿದ್ದು, ಅವುಗಳನ್ನೂ ಸಹ ಎಸ್ಸಿ ಪಟ್ಟಿಗೆ ಸೇರ್ಪಡೆ ಮಾಡಬೇಕು ಹಾಗೂ ಶಾಸಕರು ಹರಪನಹಳ್ಳಿ ಪಟ್ಟಣದಲ್ಲಿ ಮಡಿವಾಳ ಮಾಚಿದೇವರ ಹೆಸರಿನಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಸ್ಥಳಾವಕಾಶ ನೀಡಬೇಕು ಎಂದು ಮನವಿ ಮಾಡಿಕೊಂಡರು.

ಶಿಕ್ಷಕ ಅಜ್ಜಯ್ಯ ಮಡಿವಾಳ ಸಮಾಜ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಶಿವಕುಮಾರ್ ಬಿರಾದಾರ, ತಾಲ್ಲೂಕು ಮಡಿವಾಳ ಸಮಾಜದ ಅಧ್ಯಕ್ಷ ಮಜ್ಜಿಗೇರಿ ಬಸವರಾಜ, ಪುರಸಭೆ ಸದಸ್ಯರಾದ ಕಿರಣ ಶ್ಯಾನಭಾಗ, ಭರತೇಶ ಜೋಗಿನ್ನರ, ಗೌಳಿ ವಿನಯ, ಜಾರಿಕ್ ಸರ್ಖಾವಸ್, ಎಂ.ಕೆ. ಜಾವಿದ್, ಮುಖಂಡರಾದ ಬಾಗಳಿ ಕೊಟ್ರೇಶ್, ಆರ್. ಲೋಕೇಶ್, ಚಂದ್ರಕಾಂತ, ತೌಡೂರು ಭರಮಪ್ಪ, ಮಡಿವಾಳ ಬಸವರಾಜ, ಕೋಟೆಪ್ಪ, ರೇಖಮ್ಮ ಸೇರಿದಂತೆ ಇತರರು ಇದ್ದರು.

# ಭದ್ರಾ ಮೇಲ್ದಂಡೆ ಯೋಜನೆಗೆ ಅನುದಾನ ಜಗಳೂರಲ್ಲಿ ಬಿಜೆಪಿ ಸಂಭ್ರಮಾಚರಣೆ



ಜಗಳೂರು, ಫೆ. 2- ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರಕಾರ 5,300 ಕೋಟಿ ರೂ.ಅನುದಾನ ನೀಡಿದ್ದಕ್ಕಾಗಿ ಬಿಜೆಪಿ ಕಾರ್ಯಕರ್ತರು ಇಂದು ಗಾಂಧಿ ವೃತ್ತದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಿಸಿದರು.

ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆಯ ಯೋಜನೆಗೆ 5,300 ಕೋಟಿ ರೂ. ಅನುದಾನವನ್ನು ನಿಗದಿಗೊಳಿಸಿರುವುದು ಬರಪೀಡಿತ ಕ್ಷೇತ್ರದ ಜನರಿಗೆ ಸಂತಸ ಉಂಟು ಮಾಡಿದೆ ಎಂದು ತಾಲ್ಲೂಕಿನ ಬಿಜೆಪಿಯ ವಿವಿಧ ಮುಖಂಡರುಗಳು, ಬಿಜೆಪಿ ಕಾರ್ಯಕರ್ತರು ಸೇರಿ ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಡಿ.ವಿ. ನಾಗಪ್ಪ, ಮಾಜಿ ಪ್ರಧಾನ ಕಾರ್ಯದರ್ಶಿ ಜೆ.ವಿ.ನಾಗರಾಜ್, ಆರ್.ತಿಪ್ಪೇ ಸ್ವಾಮಿ, ಕೇಂದ್ರ ಸರ್ಕಾರ ನೀರಾ ವರಿ ಯೋಜನೆಗೆ ಹೆಚ್ಚಿನ ಅನುದಾನ ನೀಡಿರುವುಕ್ಕೆ ಪ್ರಧಾನ ಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಿದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷರಾದ ವಿಶಾಲಾಕ್ಷಿ ಓಬಳೇಶ್, ಸದಸ್ಯರಾದ ಪಾಪಲಿಂಗಪ್ಪ, ಕಾಯಿ ರೇವಣ್ಣ, ನವೀನ್ ಕುಮಾರ್, ಬಿ.ಪಿ. ಸುಭಾನ್, ರುದ್ರಮುನಿ, ಪಕ್ಷದ ಮುಖಂಡರಾದ ಲಲಿತಮ್ಮ ಶಿವಣ್ಣ, ಕೆ.ಟಿ. ಬಡಯ್ಯ, ರಾಜೇಶ್, ಕಿರಣ್, ಮಹೇಶ್, ರಮೇಶ್, ಓಬಣ್ಣ, ನಾಗರಾಜ್ ಮುಂತಾದವರು ಭಾಗವಹಿಸಿದ್ದರು.

### ಸಾಮೂಹಿಕ ವಿವಾಹ

ಹರಪನಹಳ್ಳಿ, ಫೆ.2- ಕಂಚಿಕೇರಿ ಗ್ರಾಮದಲ್ಲಿ ಫೆಬ್ರವರಿ 12ರಂದು ಸಾಮೂಹಿಕ ವಿವಾಹ ಜರುಗಲಿದೆ. ವಿವರಕ್ಕೆ ಸಂಪರ್ಕಿಸಿ : ಅಶ್ವಿನಿ ಕ್ಲಿನಿಕ್, ಕಂಚಿಕೇರಿ, (94486 54884, 97412 88330, 97412 11440)

### ಗೌಳಿ ನಂಜುಂಡಸ್ವಾಮಿ ನಿಧನ



ದಾವಣಗೆರೆ ಬಸವರಾಜ ಪೇಟೆ ವಾಸಿ ಗೌಳಿ ನಂಜುಂಡಸ್ವಾಮಿ (88) ಅವರು ದಿನಾಂಕ 02.02.2023ರ ಗುರುವಾರ ಮಧ್ಯಾಹ್ನ 12 ಗಂಟೆಗೆ ನಿಧನರಾದರು. ಆರು ಜನ ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿ. 03.02.2023ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ವೀರಶೈವ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

- ದುಃಖತಪ್ತ ಕುಟುಂಬ ವರ್ಗ, ಮೊ. 99640 56929

### ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



**ಶ್ರೀ ಕೆ.ಎನ್. ಕೊಟ್ರೇಶಪ್ಪನವರು**

(ಬಿಜೆಪಿ ಮುಖಂಡರು)

ಶಿವಾಧೀನರಾದ ಪ್ರಯುಕ್ತ ಇವರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 03.02.2023ನೇ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ **ಯಕ್ಕೆಗೊಂದಿ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ** ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ,

ಇಂತಿ ದುಃಖತಪ್ತರು : ಶ್ರೀ ಕೆ.ಎನ್. ಚಂದ್ರಶೇಖರಪ್ಪ ಮತ್ತು ಸಹೋದರರು, ಪತ್ನಿ, ಮಕ್ಕಳು ಮತ್ತು ಅಳಿಯಂದಿರು, ಕೋಟೆಹಾಳ್ ವಂಶಸ್ಥರು, ಭಾನುವಳ್ಳಿ, ಯಕ್ಕೆಗೊಂದಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

### ನಗರದಲ್ಲಿ ಇಂದು ಹೋಮ

ಯಲ್ಲಮ್ಮ ನಗರ, 4ನೇ ಮುಖ್ಯ ರಸ್ತೆ, 4ನೇ ಅಡ್ಡ ರಸ್ತೆಯಲ್ಲಿರುವ ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನದ 23ನೇ ವರ್ಷದ ಭರತ ಹುಣ್ಣಿಮೆ ಜಾತ್ರಾ ಮಹೋತ್ಸವ ಇಂದು ಬೆಳಿಗ್ಗೆ 7 ರಿಂದ 9 ರವರೆಗೆ ಹೋಮ ನಡೆಯಲಿದೆ. ಇದೇ ದಿನಾಂಕ 5ರ ಭಾನುವಾರ ಬೆಳಿಗ್ಗೆ 7 ರಿಂದ 10.30 ರವರೆಗೆ ಶ್ರೀಶೈಲ ಮಠದಿಂದ ಗಂಗಾ ಜಲವನ್ನು ತಂದು, ಮಧ್ಯಾಹ್ನ 12.30 ಕ್ಕೆ ಮಹಾಮಂಗಳಾರತಿ ನಡೆಯಲಿದೆ. ಕಾರ್ಯಕ್ರಮದ ಅಂಗವಾಗಿ ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

### ಹೆಚ್.ಕಲಪನಹಳ್ಳಿ ತಿಪ್ಪೀಬಾಯಿ ನಿಧನ



ದಾವಣಗೆರೆ ತಾಲ್ಲೂಕು ಹೆಚ್. ಕಲಪನಹಳ್ಳಿ ಗ್ರಾಮದ ನಿವಾಸಿ ಹನುಮಂತನಾಯ್ಕ್ ಇವರ ಧರ್ಮಪತ್ನಿ ತಿಪ್ಪೀಬಾಯಿ ಇವರು ದಿನಾಂಕ 02-02-2023 ರ ಗುರುವಾರ ರಾತ್ರಿ 8.10ಕ್ಕೆ ನಿಧನರಾದರು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 03-02-2023 ರ ಶುಕ್ರವಾರ ಮಧ್ಯಾಹ್ನ 12.30 ಕ್ಕೆ ಮೃತರ ಸ್ವಗ್ರಾಮವಾದ ಹೆಚ್. ಕಲಪನಹಳ್ಳಿ ಗ್ರಾಮದಲ್ಲಿ ನೆರವೇರಲಿದೆ.

## ಮಲೇಬೆನ್ನೂರಿನಲ್ಲಿ ಸಂಭ್ರಮದ ಸವಿತಾ ಮಹರ್ಷಿ ಜಯಂತಿ



ಮಲೇಬೆನ್ನೂರು, ಫೆ.2- ಇಲ್ಲಿನ ಪುರಸಭೆ ಮತ್ತು ನಾಡ ಕಛೇರಿ ವತಿಯಿಂದ ಸವಿತಾ ಮಹರ್ಷಿಗಳ ಜಯಂತಿಯನ್ನು ಸವಿತಾ ಸಮಾಜದವರ ಸಮ್ಮುಖದಲ್ಲಿ ಮಂಗಳವಾರ ಸಂಭ್ರಮದಿಂದ ಆಚರಿಸಲಾಯಿತು.

ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಮತ್ತು ಉಪ ತಹಶೀಲ್ದಾರ್ ಆರ್. ರವಿ ಅವರು ಸವಿತಾ ಮಹರ್ಷಿಗಳ ಕುರಿತು ಮಾತನಾಡಿ, ಸಮಾಜದ ಬಂಧುಗಳಿಗೆ ಶುಭ ಕೋರಿದರು.

ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಕೆ.ಜಿ. ಲೋಕೇಶ್, ಷಾ ಅಬ್ರಾರ್, ಟಿ. ಹನುಮಂತಪ್ಪ, ಭೋವಿ ಶಿವು, ಬಿ. ಮಂಜುನಾಥ್, ಪಿ.ಆರ್. ರಾಜು, ದಾದಾಪೀರ್, ಮಹ್ಮದ್ ಖಲೀಲ್, ನಯಾಜ್ ಹಾಗೂ ಮಾಜಿ ಸದಸ್ಯ ಬಿ. ಸುರೇಶ್, ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿ ಕುಮಾರ್, ಪಿಎಸಿಎಸ್ ಅಧ್ಯಕ್ಷ ಕೆ.ಪಿ. ಗಂಗಾಧರ್, ಜಿಗಳೇರ ಹಾಲೇಶಪ್ಪ, ಚಮನ್ ಷಾ, ಎಂ.ಬಿ. ರುಸ್ತುಂ ಮತ್ತು ಸವಿತಾ ಸಮಾಜದ ಅಧ್ಯಕ್ಷ ಕೆ.ಬಿ. ಶ್ರೀನಿವಾಸ್, ಗೌರವಾಧ್ಯಕ್ಷ ಪಿ.ಟಿ. ಶಂಕರ್‌ಬಾಬು, ಖಜಾಂಚಿ ಎನ್.ಎಸ್. ಆಂಜನೇಯ, ಕಾರ್ಯದರ್ಶಿ ಪಿ. ಪ್ರಭಾಕರ್, ಉಪಾಧ್ಯಕ್ಷ ರಾಮ್‌ಬಾಬು, ಉಪ ಕಾರ್ಯದರ್ಶಿ ಸಂತೋಷ್‌ಕುಮಾರ್, ಸಂಘಟನಾ ಕಾರ್ಯದರ್ಶಿ ಕೆ.ಜೆ. ಬಸವರಾಜ್, ಸಂಚಾಲಕ ನಾಗರಾಜ್, ಹಡಪದ ಅಪ್ಪಣ್ಣ ಸಮಾಜದ ಅಧ್ಯಕ್ಷ ನವೀನ್‌ಕುಮಾರ್, ಮುಖಂಡರಾದ ಬಸವರಾಜ್, ನಾಗರಾಜ್, ಚನ್ನಬಸಪ್ಪ, ಟಿ. ಹರೀಶ್, ವೀರಭದ್ರಪ್ಪ, ಜಿಗಳಿಯ ವಿರೂಪಾಕ್ಷಿ, ಮಂಜು, ಕೊಮಾರನಹಳ್ಳಿಯ ಅಜ್ಜಪ್ಪ ಸೇರಿದಂತೆ ಎರಡೂ ಸಮಾಜಗಳ ನೂರಾರು ಯುವಕರು ಮತ್ತು ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ, ನಾಡ ಕಛೇರಿಯ ಪುಷ್ಪಾ ಹಿರೇಮಠ್, ಶಿಲ್ಪಾ, ಮಾರುತಿ, ಬಸವರಾಜ್, ಜೈ ಮಾರುತಿ, ಸಂತೋಷ್, ತಾ. ಗ್ರಾ. ಜೆಡಿಎಸ್ ಮಾಜಿ ಅಧ್ಯಕ್ಷ ಬಂಡೇರ ತಿಮ್ಮಣ್ಣ, ಮಡಿವಾಳ ಸಮಾಜದ ಎಂ.ಆರ್. ಮಹಾದೇವಪ್ಪ ಮತ್ತಿತರರು ಭಾಗವಹಿಸಿದ್ದರು.

## ಹಿಂಡಸಘಟ್ಟೆ ಕ್ಯಾಂಪ್ : ಇಂದು ಸರ್ಕಾರಿ ಶಾಲೆ ವಾರ್ಷಿಕೋತ್ಸವ

ಮಲೇಬೆನ್ನೂರು ಸಮೀಪದ ಹಿಂಡಸಘಟ್ಟೆ ಗ್ರಾಮದ ಕ್ಯಾಂಪಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಗ್ರಾಮಸ್ಥರು ಹಾಗೂ ಪೋಷಕರು, ದಾನಿಗಳ ನೆರವಿನಿಂದ ಸುಮಾರು 5 ರಿಂದ 6 ಲಕ್ಷ ರೂ ವೆಚ್ಚದಲ್ಲಿ ಸಂಪೂರ್ಣವಾಗಿ ಅಭಿವೃದ್ಧಿ ಪಡಿಸುವ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ.

ಈ ಹಿನ್ನೆಲೆಯಲ್ಲಿ ಶಾಲೆಯ ದ್ವಿಶತಮಾನೋತ್ಸವ ಮತ್ತು 20ನೇ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಮಧ್ಯಾಹ್ನ 2 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು, ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕ ಬಿ. ಅರುಣ್‌ಕುಮಾರ್ ಮತ್ತು ಸಹ ಶಿಕ್ಷಕಿ ಲಕ್ಷ್ಮಿದೇವಿ ತಿಳಿಸಿದ್ದಾರೆ.



ಬೆಳಿಗ್ಗೆ ರಂಗೋಲಿ ಸ್ಪರ್ಧೆ ನಂತರ 101 ಮಹಿಳೆಯರಿಂದ ಕುಂಭಮೇಳ ಹಾಗೂ ಟ್ರ್ಯಾಕ್ಟರ್‌ನಲ್ಲಿ ವೇಷಗಳೊಂದಿಗೆ ಜಾತ್ರಾ ಕಾರ್ಯಕ್ರಮ ಮತ್ತು ಹಿಂಡಸಘಟ್ಟೆ ಹಾಗೂ ಕೊಕ್ಕನೂರು ಸಹ ಗ್ರಾಮಗಳ ದೇವರುಗಳ ದರ್ಶನವನ್ನು ಸಹ ಏರ್ಪಡಿಸಿದ್ದಾರೆ.

ಕಾರ್ಯಕ್ರಮದಲ್ಲಿ ಶಾಸಕ ಎಸ್. ರಾಮಪ್ಪ ಸೇರಿದಂತೆ ವಿವಿಧ ಜನಪ್ರತಿನಿಧಿಗಳು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಭಾಗವಹಿಸಲಿದ್ದಾರೆ.

### 'ಅಂಚೆ-ಕುಂಚ' ಸ್ಪರ್ಧೆ

ದಾವಣಗೆರೆ, ಫೆ.2- ನಗರದ ಕಲಾಕುಂಚ ಆಶ್ರಯದಲ್ಲಿ ಮಹಾ ಶಿವರಾತ್ರಿ ಪ್ರಯುಕ್ತ 50 ಪೈಸೆ ಅಂಚೆ ಕಾರ್ಡಿನಲ್ಲಿ ರಾಜ್ಯ ಮಟ್ಟದ ಚಿತ್ರ ಬರೆಯುವ 'ಅಂಚೆ-ಕುಂಚ' ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ.

ಯಾವುದೇ ಕಲಾ ಪ್ರಕಾರಗಳಲ್ಲಿ ಎಷ್ಟಾದರೂ ಶಿವನ ಚಿತ್ರ ಬರೆದು ಇದೇ ದಿನಾಂಕ 15 ರೊಳಗೆ ತಲುಪುವಂತೆ ಕನ್ನಡದಲ್ಲಿ ತಮ್ಮ ಹೆಸರು, ವಿಳಾಸ ವಯಸ್ಸು, ವ್ಯಾಟ್ಸಾಪ್ ಸಂಖ್ಯೆ ಕಳಿಸಬೇಕು. ಚಿತ್ರ ಬರೆದು ಅಂಚೆ ಕಾರ್ಡ್ ಕಳುಹಿಸುವ ವಿಳಾಸ # 431, 'ಕನ್ನಡ ಕೃಪಾ' ಕುವೆಂಪು ರಸ್ತೆ, ಕಸ್ತೂರಬಾ ಬಡಾವಣೆ, ದಾವಣಗೆರೆ- 577 002., ಮೊ. 9538732777.

### ರಸ್ತೆ ಅಪಘಾತ : ಮಹಿಳೆಯ ಸಾವು

ದಾವಣಗೆರೆ, ಫೆ.2- ನಿಂತಿದ್ದ ಲಾರಿಗೆ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಮಹಿಳೆಯೋರ್ವರು ಸಾವನ್ನಪ್ಪಿರುವ ಘಟನೆ ನಗರದ ಶಾಮನೂರು ಬಳಿಯ ಪಂಜಾಬಿ ಡಾಬಾ ಬಳಿ ನಡೆದಿದೆ.

ಹರಿಹರ ತಾಲ್ಲೂಕಿನ ಎಳೆಹೊಳೆ ಗ್ರಾಮದ ಗಂಗಮ್ಮ (42) ಮೃತರು. ಕವಿತಾ ಹಾಗೂ ವಾಹನ ಚಾಲಕ ನಿಂಗಪ್ಪ ಗಾಯಗೊಂಡಿದ್ದು, ಎಸ್. ಎಸ್. ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆ ಯುತ್ತಿದ್ದಾರೆ. ಹರಿಹರದಿಂದ ದಾವಣಗೆರೆಗೆ ತರಕಾರಿ ತೆಗೆದು ಕೊಂಡು ಹೋಗಲು ಮೃತ ಗಂಗಮ್ಮ ಕವಿತಾರೊಂದಿಗೆ ಬಂದಿದ್ದರು.

# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 30.01.2023ರ ಸೋಮವಾರ ರಾತ್ರಿ 11.30ಕ್ಕೆ ನಿಧನರಾದ,
ಶಾಮನೂರು ಶಿವಪ್ಪ ಕಾಂಪ್ಲೆಕ್ಸ್ ಮಾಲೀಕರಾದ
ಶಾಮನೂರು ಶಿವಪ್ಪನವರ ಪುತ್ರರಾದ

## ಎಸ್.ಎಸ್.ಜಯಣ್ಣ

ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಇವರ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಭಗವಂತನು ನೀಡಲೆಂದು ಪ್ರಾರ್ಥಿಸುತ್ತೇವೆ ಮತ್ತು ಮೃತರ ಆತ್ಮಕ್ಕೆ ಶಾಂತಿ ಕೋರುತ್ತೇವೆ.

**ಶ್ರೀ ಅಣಬೇರು ರಂಗನಾಥ ಆಗ್ರೋ ಏಜೆನ್ಸಿ**
**ಶ್ರೀ ತರಳಬಾಳು ಆಗ್ರೋ ಸರ್ವೀಸ್**
**ಶ್ರೀ ಪ್ರಶಾಂತ್ ಆಗ್ರೋ ಫರ್ಟಿಲೈಜರ್ಸ್**
**ಶ್ರೀ ವೆಂಕಟೇಶ್ವರ ಆಗ್ರೋ ಫರ್ಟಿಲೈಜರ್ಸ್**
**ಶ್ರೀ ಕೆ.ಎಂ. ಈಶ್ವರಪ್ಪ ಅಂಡ್ ಸನ್ಸ್ ಕಿರಾಣಿ ವ್ಯಾಪಾರಿಗಳು.**

**ಶಶಿ ಆಪ್ಟಿಕಲ್ಸ್**
**ವಿಶ್ವ ಬಂಧು ಎಲೆಕ್ಟ್ರಿಕಲ್ಸ್**
**ಬೆಂಗಳೂರು ಗುಡ್ ಬೇಕರಿ**
**ಬಾಲಾಜಿ ಬೇಕರಿ**
**ಪವನ್ ಬೆಣ್ಣೆದೋಸೆ ಹೋಟೆಲ್**
**ಕರ್ನಾಟಕಫೋಟೋಸ್ಟುಡಿಯೋ**

**ಹೋಟೆಲ್ ಪೂರ್ಣಿಮಾ**
**ಎಸ್.ವಿ ಟೆಕ್ಸ್‌ಟೈಲ್ಸ್**
**ಬಾಂಬೆ ವಾಚ್ ಸರ್ವೀಸ್**
**ಕೃಷ್ಣೋಜಿರಾವ್‌ಪಾಂಡಪ್ಪ**
**ಸೆಲೆಕ್ಟ್ ಹೇರ್ ಡ್ರೆಸಸ್**

## ನಿಟುವಳ್ಳಿ : ಇಂದು ಗೋಪುರ ನಿರ್ಮಾಣಕ್ಕೆ ಭೂಮಿ ಪೂಜೆ

ಶ್ರೀ ದುರ್ಗಾಂಬಿಕಾ ದೇವಸ್ಥಾನದ ಗೋಪುರ ಹಾಗೂ ಮಹಾಮಂಟಪದ ಕಟ್ಟಡ ನಿರ್ಮಾಣಕ್ಕೆ ಇಂದು ಬೆಳಗ್ಗೆ 5-30 ರಿಂದ 6-30 ರ ವರೆಗೆ ಸಲ್ಲುವ ಶುಭ ಮುಹೂರ್ತದಲ್ಲಿ ಭೂಮಿ ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಹೆಚ್.ಬಿ.ಮಂಜುನಾಥ್ ತಿಳಿಸಿದ್ದಾರೆ.



## ರಾಜ್ಯ ಬ್ಯಾಸ್ಕೆಟ್ ಬಾಲ್ ತಂಡಕ್ಕೆ ಆಯ್ಕೆ



ದಾವಣಗೆರೆ, ಫೆ.2- ಮಧ್ಯ ಪ್ರದೇಶದ ಇಂದೋರ್‌ನಲ್ಲಿ ನಡೆಯುತ್ತಿರುವ ಖೇಲೋ ಇಂಡಿಯಾ 18 ವರ್ಷದೊಳಗಿನ ಬಾಲಕರ ತಂಡಕ್ಕೆ ನಗರದ ಕ್ರೀಡಾಪಟುಗಳಾದ ನಿತಿಶ್‌ಕುಮಾರ್, ವಿಷ್ಣು ಇವರು ಆಯ್ಕೆಯಾಗಿದ್ದಾರೆ.

## ಸ್ಮರಣ ಸಂಚಿಕೆಗೆ ಲೇಖನ ಆಹ್ವಾನ

ದಾವಣಗೆರೆ, ಫೆ. 2 - ದಾವಣಗೆರೆ ತಾಲ್ಲೂಕು 9 ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ತಾಲ್ಲೂಕಿನ ಹೊಸ ಬೆಳವನೂರಿನಲ್ಲಿ ಇದೇ ದಿನಾಂಕ 18 ರ ಶನಿವಾರ ಹಮ್ಮಿಕೊಳ್ಳಲಾಗಿದ್ದು, ಪ್ರಯುಕ್ತ ಸಮ್ಮೇಳನದ ಸವಿನೆನಪಿಗಾಗಿ ಸ್ಮರಣ ಸಂಚಿಕೆಯನ್ನು ಪ್ರಕಟಿಸಲಾಗುತ್ತದೆ. ಅದಕ್ಕಾಗಿ ಲೇಖನ, ಕವನಗಳನ್ನು ಆಹ್ವಾನಿಸಲಾಗಿದೆ.

ಆಸಕ್ತರು ಇದೇ ದಿನಾಂಕ 5ರೊಳಗಾಗಿ ತಮ್ಮ ಬರಹಗಳನ್ನು ನುಡಿ ತಂತ್ರಾಂಶದಲ್ಲಿ ಮುದ್ರಿಸಿ ಈ ap_suprith@yahoo.co.in ಮೇಲ್ ಐಡಿ ಗೆ ಅಥವಾ ಖುದ್ದಾಗಿ ಕುವೆಂಪು ಕನ್ನಡ ಭವನಕ್ಕೆ ತಲುಪಿಸಬೇಕೆಂದು ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಕೋರಿದ್ದಾರೆ. ಸಂಪರ್ಕಕ್ಕಾಗಿ : 94816 72324. 99806 34697


ASWHINI EDUCATIONA ASSOCIATION

**Ashwini Ayurvedic Medical College**
Opp. Bathi Lake, Davanagere. ID - 1710
ಅಶ್ವಿನಿ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ & ಪಿ.ಜಿ. ಸೆಂಟರ್
ಬಾತಿ ಕೆರೆ ಎದುರು, ದಾವಣಗೆರೆ.

**BAMS & MD & MS**
**Eligible for BAMS**
NEET MARKS OBC/SC/ST - 93, GEN - 117
PUC, PCB - 50%
Enrolled students have to verify documents on 3.02.2023 & 04.02.2023


Admission & KEA Registration & Document verification

**Eligible for MD & MS, BAMS Graduate with AIPGET**
(OBC/SC/ST) - 93, GEN - 109
Principal, M : 94498 23088

**Document List**
♦ Caste / income Certificate ♦ KEA 'UGCET / UG-Neet 2022' Online Application form (latest Copy) ♦ Photo Identity Proof (PAN Card / DL / Voter ID / Passport / Aadhar) (Xerox Copy) ♦ CET / NEET - 2022 Admission ticket ♦ SSLC / 10th standard marks card or Equilalent certificate ♦ 2nd PUC 12th Standard Marks Card or Equivalent marks card ♦ Candidates study Certificate for 7 years including SSLC or 2nd PUC / 12th Std.










# ಕಣ್ಮರೆಯಾಗುತ್ತಿರುವ ಜನಪದ ಕಲೆ



ಜಾನಪದ ಕಲಾ ಪ್ರದರ್ಶನ, ವಿಚಾರ ಗೋಷ್ಠಿಯಲ್ಲಿ ಹಿರಿಯ ನ್ಯಾಯವಾದಿ ಎಲ್.ಹೆಚ್. ಅರುಣ್ ಕುಮಾರ್

ದಾವಣಗೆರೆ, ಫೆ.2- ಆಧುನಿಕತೆಯ ಮೊಬೈಲ್ ಹಾಗೂ ಅಂತರ್ಜಾಲ ತಂತ್ರಜ್ಞಾನ ಯುಗದಲ್ಲಿ ಮೂಲ ಸಾಂಸ್ಕೃತಿಕ ಬೇರುಗಳು, ಗ್ರಾಮೀಣ ಜನಪದ ಕಲೆಗಳು ಕಣ್ಮರೆಯಾಗುತ್ತಿವೆ ಎಂದು ಹಿರಿಯ ನ್ಯಾಯವಾದಿ ಎಲ್. ಹೆಚ್. ಅರುಣ್ ಕುಮಾರ್ ಹೇಳಿದರು.

ನಗರದ ರೋಟರಿ ಬಾಲಭವನದಲ್ಲಿ ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಏರ್ಪಡಿಸಿದ್ದ ಜಾನಪದ ಕಲಾ ಪ್ರದರ್ಶನ, ವಿಚಾರ ಗೋಷ್ಠಿ, ಜಾನಪದ ಗೀತೆಗಳ ಗಾಯನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜಾನಪದ ಸಾಹಿತ್ಯ ಮತ್ತು ಗ್ರಾಮೀಣ ಜನಪದ ಕಲೆಗಳನ್ನು ಉಳಿಸಿ, ಬೆಳೆಸುವಲ್ಲಿ ಪ್ರತಿಯೊಬ್ಬರೂ ಮುಂದಾಗಬೇಕು. ವೀರಗಾಸೆ, ಡೊಳ್ಳು, ತಮಟೆ, ತತ್ವಪದ, ಸೋಬಾನೆ ಪದ ಸೇರಿದಂತೆ ಅನೇಕ ಜನಪದ ಕಲೆಗಳನ್ನು ಇಂದಿಗೂ ಜೀವಂತವಾಗಿಟ್ಟುಕೊಂಡು ಬರಲಾಗಿದೆ ಎಂದರು.

ಕಲಾವಿದರು ಕಲೆಗಳನ್ನು ವೃತ್ತಿಯನ್ನಾಗಿ ಮಾಡಿಕೊಳ್ಳದೇ ಪ್ರವೃತ್ತಿಯನ್ನಾಗಿಸಿ ಕೊಳ್ಳುವ ಜೊತೆಗೆ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಜೊತೆಗೆ ಸಮಾಜದ ಮುಖ್ಯವಾಹಿನಿಗೆ ತರಬೇಕೆಂದು ಕರೆ ನೀಡಿದರು.

ಜಗತ್ತಿನ ಎಲ್ಲಾ ಸಾಹಿತ್ಯಕ್ಕೆ ಮೂಲ ಪ್ರೇರಣೆ ಹಾಗೂ ಮಾರ್ಗದರ್ಶಕ ಜಾನಪದ ಸಾಹಿತ್ಯ. ಕ್ರಿ.ಪೂ. 4 ಸಾವಿರ ವರ್ಷಗಳವರೆಗೂ ಸಹ ನಮ್ಮಲ್ಲಿ ಯಾವುದೇ ಲಿಖಿತ ಸಾಹಿತ್ಯ ಇರಲಿಲ್ಲ, ಬಾಯಿಂದ ಬಾಯಿಗೆ, ತಲ ತಲಾಂತರದಿಂದ ಹರಿದು ಬಂದ ಸಾಹಿತ್ಯ ಜನಪದ ಸಾಹಿತ್ಯ. ಜನಪದ ಸಾಹಿತ್ಯ ಮಾನವನ ಬದುಕಿನೊಂದಿಗೆ ನಿರಂತರ ಅವಿನಾಭಾವ ಸಂಬಂಧವನ್ನು ಹೊಂದಿದೆ ಎಂದು ಹೇಳಿದರು.

ಯಕ್ಷಗಾನ, ಮೂಡಲಪಾಯ, ಬಯಲಾಟದ ಸ್ಥಿತಿಗತಿಗಳ ಕುರಿತು ಚನ್ನಗಿರಿ ತಾಲ್ಲೂಕು ಹವ್ವಾಸಿ ಗ್ರಾಮೀಣ ವಿವಿಧ ಕಲಾವಿದರ ಒಕ್ಕೂಟದ ಅಧ್ಯಕ್ಷ ಬಿ.ಇ. ತಿಪ್ಪೇಸ್ವಾಮಿ ಮಾತನಾಡಿದರು.

ನಿವೃತ್ತ ಪ್ರಾಚಾರ್ಯ ಡಾ. ಜಿ. ಸಿದ್ದಪ್ಪ, ರಂಗ ಕಲಾವಿದ ಕಡಬಗೆರೆ ಡಾ. ಎ. ಶಿವಲಿಗೌಡ್ರು ಮಾತನಾಡಿದರು. ಬಸಾಪುರದ ಶ್ರೀ ರೇವಣಸಿದ್ದೇಶ್ವರ ವಿದ್ಯಾಸಂಸ್ಥೆಯ ಅಧ್ಯಕ್ಷ ಎ.ಎಸ್. ನಾಗರಾಜಪ್ಪ ಮಳ್ಳೇಕಟ್ಟೆ ಅಧ್ಯಕ್ಷತೆ ವಹಿಸಿದ್ದರು.

ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ಅಧ್ಯಕ್ಷ ಎಸ್.ಎಸ್. ರಾಜು ಉಪಸ್ಥಿತರಿದ್ದರು. ಚನ್ನಗಿರಿಯ ವಾಣಿಶ್ರೀ ನಿರೂಪಿಸಿದರು. ವಿವಿಧ ಭಾಗಗಳಿಂದ ಆಗಮಿಸಿದ ಕಲಾವಿದರು ತಮ್ಮ ಕಲಾ ಪ್ರದರ್ಶನ ನೀಡಿದರು.

# ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಗೆ ಚರ್ಚೆ

**(1ನೇ ಪುಟದಿಂದ)** ಪೂರ್ಣ ಮಾಹಿತಿ ಪಡೆದ ರಾಜ್ಯ ನಾಯಕರು, ಶಿಫಾರಸ್ಸು ಮಾಡಿದ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿದರೆ ಅವರ ಗೆಲುವಿನ ಸಾಮರ್ಥ್ಯ ಹೇಗಿದೆ? ಆ ಕ್ಷೇತ್ರದಲ್ಲಿ ನಮಗೆ ಹತ್ತಿರದ ವಿರೋಧಿ ಯಾರು? ನೇರ ಸ್ಪರ್ಧೆ ಇದೆಯೇ? ಇಲ್ಲವೇ ತ್ರಿಕೋನ ಸ್ಪರ್ಧೆ ಯೋ? ಎಂಬ ಬಗ್ಗೆ ಪೂರ್ಣ ಮಾಹಿತಿ ಪಡೆದರು.

ಮಾಹಿತಿ ಪಡೆದ ನಂತರ ರಾಜ್ಯ ಉಸ್ತುವಾರಿ ಸುರ್ಜೇವಾಲ, ವರಿಷ್ಠರು, ರಾಜ್ಯ ಘಟಕ ಮತ್ತು ಸ್ಥಳೀಯ ಹಿರಿಯ ನಾಯಕರು ಪ್ರತ್ಯೇಕವಾಗಿ ಚುನಾವಣಾ ಪೂರ್ವ ಸಮೀಕ್ಷೆ ನಡೆಸಿದ್ದಾರೆ.

ನೀವು ಮಾಡಿರುವ ಶಿಫಾರಸ್ಸು ಹಾಗೂ ಪೂರ್ವ ಸಮೀಕ್ಷೆಯನ್ನು ಮುಂದಿಟ್ಟುಕೊಂಡು ರಾಜ್ಯ ಚುನಾವಣಾ ಸಮಿತಿ ಒಂದು ಕ್ಷೇತ್ರಕ್ಕೆ ಒಬ್ಬರು ಅಥವಾ ಇಬ್ಬರ ಹೆಸರುಗಳನ್ನು ಅಂತಿಮಗೊಳಿಸಿ ವರಿಷ್ಠರಿಗೆ ಶಿಫಾರಸ್ಸು ಮಾಡುವುದಾಗಿ ಸುರ್ಜೇವಾಲಾ ಸಭೆಗೆ ತಿಳಿಸಿದ್ದಾರೆ.

ಆಡಳಿತಾರೂಢ ಬಿಜೆಪಿ ಇದುವರೆಗೂ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿಲ್ಲ. ಆ ಬಗ್ಗೆ ಪ್ರಸ್ತಾಪ ಎತ್ತುತ್ತಿಲ್ಲ. ಜೆಡಿಎಸ್ 93 ಕ್ಷೇತ್ರಗಳಿಗೆ ಅಭ್ಯರ್ಥಿ ಘೋಷಣೆ ಮಾಡಿದೆ. ಅದರಲ್ಲಿ ಸಕ್ರಿಯವಾಗಿರದ ಕೆಲವು ಅಭ್ಯರ್ಥಿಗಳ ಬದಲಾವಣೆಯಾಗಲಿದೆ ಎಂಬ ಮಾಹಿತಿ ಇದೆ. ಬಿಜೆಪಿಯ ಮೊದಲ ಪಟ್ಟಿ ಬಿಡುಗಡೆ ನಂತರ ಸೂಕ್ತ ಸಮಯ ನೋಡಿಕೊಂಡು ನಾವು ಗೊಂದಲವಿಲ್ಲದ ಕ್ಷೇತ್ರಗಳ ಅಭ್ಯರ್ಥಿಗಳನ್ನು ಪ್ರಕಟಿಸುವುದಾಗಿ ತಿಳಿಸಿದರು.

> **ಸಭೆಯ ಮಧ್ಯೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪಕ್ಷದ ಅಭ್ಯರ್ಥಿಗಳ ಆಯ್ಕೆಯನ್ನು ಆದಷ್ಟು ಬೇಗ ಪ್ರಕಟಿಸಲಾಗುವುದು. ಹಾಲಿ ಪಕ್ಷದ ಶಾಸಕರಿಗೆಲ್ಲ ಮತ್ತೆ ಟಿಕೆಟ್ ಸಿಗಲಿದೆ ಎಂಬ ಸುಳಿವು ನೀಡಿದರು.**
> **ಹಾಲಿ ಶಾಸಕರುಗಳೆಲ್ಲರೂ ಉತ್ತಮ ವಾಗಿ ಕೆಲಸ ಮಾಡಿದ್ದಾರೆ. ಬಿಜೆಪಿ ಸರ್ಕಾರ ಅನುದಾನ ಸರಿಯಾಗಿ ನೀಡದಿದ್ದರೂ, ಎಲ್ಲರೂ ಶಕ್ತಿ ಮೀರಿ ಕ್ಷೇತ್ರದ ಅಭಿವೃದ್ಧಿಯನ್ನು ಮಾಡಿದ್ದಾರೆ. ಹಾಗಾಗಿ, ಹಾಲಿ ಶಾಸಕರಿಗೇ ಟಿಕೆಟ್ ನಿಶ್ಚಿತ ಎಂಬರ್ಥದಲ್ಲಿ ಮಾತನಾಡಿದರು.**

## ಮೀಸಲು ಕ್ಷೇತ್ರಗಳ ಅಭ್ಯರ್ಥಿ ಆಯ್ಕೆ ನಮಗೇ ಬಿಡಿ ಕಾಂಗ್ರೆಸ್ ಪರಿಶಿಷ್ಟ ನಾಯಕರು

ಬೆಂಗಳೂರು, ಫೆ.2 - ರಾಜ್ಯ ವಿಧಾನ ಸಭಾ ಚುನಾವಣೆಗೆ ಮೀಸಲು ಕ್ಷೇತ್ರಗಳಲ್ಲಿನ ಅಭ್ಯರ್ಥಿಗಳ ಆಯ್ಕೆ ಅಧಿಕಾರವನ್ನು ನಮಗೇ ನೀಡಬೇಕು ಎಂದು ಕಾಂಗ್ರೆಸ್ ಪರಿಶಿಷ್ಟ ಜಾತಿ ಮತ್ತು ಪಂಗಡದ ನಾಯಕರು ಪ್ರಸ್ತಾಪ ಮುಂದಿಟ್ಟಿದ್ದಾರೆ.

ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಮುಂದೆ ಈ ಪ್ರಸ್ತಾಪವಿಟ್ಟಿದ್ದಾರೆ. ಎಸ್ಸಿ, ಎಸ್ಟಿ ಮೀಸಲು ಕ್ಷೇತ್ರದಲ್ಲಿ ಯಾರನ್ನು ಸ್ಪರ್ಧೆಗಿಳಿಸಿದರೆ ಗೆಲುವು ನಿಶ್ಚಿತ ಎಂಬುದು ನಮಗೆ ಚೆನ್ನಾಗಿ ಗೊತ್ತಿದೆ. ನಮ್ಮ ಸಮುದಾಯದ ನಾಡಿ ಮಿಡಿತ ನಿಮಗಿಂತ ನಮಗೆ ಚೆನ್ನಾಗಿ ಗೊತ್ತಿರುವ ಹಿನ್ನೆಲೆಯಲ್ಲಿ ಸಮರ್ಥ ಅಭ್ಯರ್ಥಿಗಳ ಆಯ್ಕೆಯನ್ನು ನಮಗೇ ಬಿಡಬೇಕು ಎಂದವರು ಮನವಿ ದಾಖಲಿಸಿದ್ದಾರೆ. ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ 48 ಕ್ಷೇತ್ರಗಳು ಮೀಸಲು ಕ್ಷೇತ್ರಗಳಾಗಿವೆ. ಇವುಗಳಲ್ಲಿ 33 ಎಸ್ಸಿ, 15 ಎಸ್ಟಿ ಕ್ಷೇತ್ರಗಳಾಗಿವೆ.

# ದೇವಸ್ಥಾನಗಳು ಮೌಢ್ಯ, ಕಂದಾಚಾರಗಳನ್ನು ಬಿತ್ತಬಾರದು

**(1ನೇ ಪುಟದಿಂದ)** ಮನುಷ್ಯರು ಸೃಷ್ಟಿಸಿಕೊಂಡಿದ್ದಾರೆ. ಇದು ಸಲ್ಲ, ಸಮಾಜದಲ್ಲಿ ಜ್ಯೋತಿಯನ್ನು ಬೆಳಗಿಸಬೇಕು. ಜಾತಿಯ ಕಿಡಿ ಹೊತ್ತಿಸಬಾರದು. ನಮ್ಮ ಆಲೋಚನೆಗಳು ಜನಪರ, ಜೀವಪರ, ಬಡವರ ಪರ ಇರಬೇಕು ಎಂದು ಹೇಳಿದರು.

ನಮ್ಮಲ್ಲಿ ಇನ್ನೂ ಎಷ್ಟೋ ಮನೆಗಳಲ್ಲಿ ಶೌಚಾಲಯ, ಸ್ನಾನದ ಮನೆಗಳಂಥ ಮೂಲಭೂತ ಸೌಕರ್ಯಗಳಿಲ್ಲ. ಆದರೆ, ನಮ್ಮ ಜನರು ದೇವಸ್ಥಾನಗಳಿಗೆ ಸಾಲ ಮಾಡಿಯಾದರೂ ದೇಣಿಗೆ ನೀಡುತ್ತಾರೆ. ಇದು ಅವರ ಒಳ್ಳೆಯ ತನದ ಸಂಕೇತ. ನಮ್ಮ ಮನೆತನಕ್ಕೆ, ನಮ್ಮ ಮಕ್ಕಳಿಗೆ ಒಳಿತಾದರೆ ಸಾಕು ಎನ್ನುವ ನಿರೀಕ್ಷೆಯಿಂದ ಹೀಗೆ ದೇವರ ಕಾರ್ಯಗಳಿಗೆ ಹಣ ನೀಡುತ್ತಾರೆ. ಅದೇ ರೀತಿ, ತಮ್ಮ ಮನೆಗಳಲ್ಲೂ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಶ್ರದ್ಧೆ ವಹಿಸಬೇಕು. ಎಲ್ಲರೂ ಪ್ರತಿ ಮನೆಯಲ್ಲಿ ನೈರ್ಮಲ್ಯಯುಕ್ತವಾದ ಶೌಚಾಲಯ ಹಾಗೂ ಸ್ನಾನದ ಮನೆಗಳನ್ನು ನಿರ್ಮಿಸಿಕೊಂಡು, ತಪ್ಪದೇ ಬಳಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ವಿವರಿಸಿದರು.

ನಿವೃತ್ತ ಪ್ರಾಂಶುಪಾಲ ಎಸ್.ಆರ್. ಹನುಮಂತಪ್ಪ ರಚಿಸಿದ "ಮನಸು ಮಹಿಮೆ" ಪುಸ್ತಕವನ್ನು ಹೊನ್ನಾಳಿ ಹಿರೇಕಲ್ಮಠದ ಶ್ರೀ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಬಿಡುಗಡೆ ಮಾಡಿದರು.

ಬೆಂಗಳೂರಿನ ಶ್ರೀ ಸಿದ್ಧಿವಿನಾಯಕ ಶರಭೇಶ್ವರ ಪೀಠದ ಶ್ರೀ ಮಹರ್ಷಿ ಗಂಡೋಡಿ ಜಯ ಶ್ರೀನಿವಾಸನ್ ಗುರೂಜಿ, ಚನ್ನಗಿರಿ ತಾಲ್ಲೂಕು ವಡ್ನಾಳ್‌ನ ವಿಶ್ವಕರ್ಮ ಸಾವಿತ್ರಿ ಪೀಠದ ಶ್ರೀ ಅಷ್ಟೋತ್ತರ ಶತಶ್ರೀ ಶಂಕರಾತ್ಮಾನಂದ ಸ್ವಾಮೀಜಿ, ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಎಸ್.ಕೆ. ನರಸಿಂಹಮೂರ್ತಿ, ಪ್ರಧಾನ ಅರ್ಚಕ ಎಸ್. ರಾಜು ಸ್ವಾಮಿ, ಅರಬಗಟ್ಟೆ ಗ್ರಾಪಂ ಸದಸ್ಯ ಎಸ್.ಆರ್. ಮಂಜುನಾಥ್, ನಿವೃತ್ತ ಎಂಜಿನಿಯರ್ ಕುಂಕುವ ಜಿ. ಮಂಜುನಾಥ್, ಉಪನ್ಯಾಸಕ ಎಸ್.ವಿ. ನಾರಾಯಣ್ ಇತರರು ಮಾತನಾಡಿದರು.

ಅರಬಗಟ್ಟೆ ಗ್ರಾಪಂ ಅಧ್ಯಕ್ಷೆ ಅನಿತಾ ಕರಿಬಸಪ್ಪ, ಸದಸ್ಯರಾದ ಡಿ.ಬಿ. ಶ್ರೀನಾಥ್, ಕರಿಯಮ್ಮ ಅಣ್ಣಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಗೊಲ್ಲರಹಳ್ಳಿ ಜಿ.ಪಿ. ವರದರಾಜಪ್ಪ ಗೌಡ್ರು, ನಿವೃತ್ತ ಪ್ರಾಂಶುಪಾಲ ಎಸ್.ಆರ್. ಹನುಮಂತಪ್ಪ, ಮುಖಂಡರಾದ ಎಚ್. ಆರ್. ರಾಕೇಶ್, ಎಸ್.ಎನ್. ಪ್ರಸನ್ನಕುಮಾರ್ ಇತರರು ಇದ್ದರು.

### ಒಳಿತಾಗಲಿ...

**ಸುಂಕದಕಟ್ಟೆ ಗ್ರಾಮದ ಶ್ರೀ ಮಂಜುನಾಥ ಸ್ವಾಮಿ-ಶ್ರೀ ನರಸಿಂಹ ಸ್ವಾಮಿ ದೇವಸ್ಥಾನದ ರಾಜ ಗೋಪುರದ ಕಳಸಾರೋಹಣ ಕಾರ್ಯಕ್ರಮವನ್ನು ನಾವು ಅತ್ಯಂತ ಸಂತಸದಿಂದ ನೆರವೇರಿಸಿದ್ದೇವೆ. ರೈತರಿಗೆ, ಶ್ರಮಿಕರಿಗೆ, ಬಡವರಿಗೆ, ದೀನ-ದಲಿತರಿಗೆ ಒಳ್ಳೆಯದಾಗಲಿ ಎಂದು ನಾವು ಕಳಸಾರೋಹಣದ ವೇಳೆ ಸ್ವಾಮಿಯಲ್ಲಿ ಬೇಡಿಕೊಂಡಿದ್ದೇವೆ.**

**- ಶ್ರೀ ಡಾ. ಶಾಂತವೀರ ಸ್ವಾಮೀಜಿ**
ಅಖಿಲ ಕುಂಚಿಟಿಗ ಮಹಾಸಂಸ್ಥಾನ ಮಠ, ಹೊಸದುರ್ಗ

# ಅದಾನಿ ಸಮೂಹದ ವಿರುದ್ಧ ತನಿಖೆ

**(1ನೇ ಪುಟದಿಂದ) ಜೊ ಜಾನ್ಸನ್ ರಾಜೀನಾಮೆ :** ಬ್ರಿಟನ್ ಮಾಜಿ ಪ್ರಧಾನಿ ಬೋರಿಸ್ ಜಾನ್ಸನ್ ಅವರ ಸಹೋದರ ಜೋ ಜಾನ್ಸನ್ ಅವರು ಅದಾನಿ ಎಂಟರ್‌ಪ್ರೈಸಸ್ ಜೊತೆ ಸಂಬಂಧ ಹೊಂದಿರುವ ಬ್ರಿಟನ್‌ನ ಹೂಡಿಕೆ ಸಂಸ್ಥೆಯಾದ ಎಲರಾ ಕ್ಯಾಪಿಟಲ್ ಕಾರ್ಯಕಾರೇತರ ನಿರ್ದೇಶಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

**ಹೆಚ್ಚಿನ ನಿಗಾ :** ಅದಾನಿ ಎಂಟರ್‌ಪ್ರೈಸಸ್, ಅದಾನಿ ಪೋರ್ಟ್ಸ್ ಹಾಗೂ ಅಂಬುಜಾ ಸಿಮೆಂಟ್ಸ್ ಕಂಪನಿಗಳ ಮೇಲೆ ಅಲ್ಪಾವಧಿಯಲ್ಲಿ ಹೆಚ್ಚುವರಿ ನಿಗಾ ವಹಿಸಲು ಬಿ.ಎಸ್.ಇ. ಹಾಗೂ ಎನ್.ಎಸ್.ಇ.ಗಳು ನಿರ್ಧರಿಸಿವೆ.

ಗುರುವಾರದಂದು ಅದಾನಿ ಎಂಟರ್‌ಪ್ರೈಸಸ್ ಷೇರುಗಳು ಶೇ.26ರ ಕುಸಿತ ಕಂಡಿತ್ತು. ಅದಾನಿ ಸಮೂಹದ ಬಹುತೇಕ ಕಂಪನಿಗಳು ಆರು ದಿನಗಳಿಂದ ಸತತ ಕುಸಿತ ಕಾಣುತ್ತಿವೆ. ಇದುವರೆಗೂ ಸಮೂಹದ ಆಸ್ತಿ ಮೌಲ್ಯ 8.76 ಲಕ್ಷ ಕೋಟಿ ರೂ.ಗಳ ಕುಸಿತ ಕಂಡಿದೆ.

# ಸ್ವಾವಲಂಬಿ ಮಾನಸಿಕತೆ

**(1ನೇ ಪುಟದಿಂದ)** ತಂತ್ರಜ್ಞಾನ ಇರಲಿಲ್ಲ. ಆದರೆ, ಸಂಬಂ ಧಗಳು ಗಟ್ಟಿಯಾಗಿದ್ದವು. ಈ ವಾಟ್ಸಾಪ್ ಯುಗದಲ್ಲಿ ಸಂಪರ್ಕ ತಂತ್ರಜ್ಞಾನ ಬೆಳಿದಿದೆ. ಆದರೆ, ಆತ್ಮೀಯತೆ ಮರೆತಿದ್ದೇವೆ. ಕುಟುಂಬಗಳಲ್ಲೇ ಮಾತುಕತೆ ಕಡಿಮೆ ಯಾಗಿದೆ ಎಂದು ವಿಷಾದಿಸಿದರು. ವಸುದೈವ ಕುಟುಂಬಕಂ ಎಂಬ ಶ್ರೇಷ್ಠ ಸಂದೇಶದಿಂದ ಇಡೀ ವಿಶ್ವವೇ ಕುಟುಂಬ ಎನ್ನುತ್ತೇವೆ. ಆದರೆ, ಕುಟುಂಬದಲ್ಲೇ ಸಂತೋಷವನ್ನು ಕಾಣುತ್ತಿಲ್ಲ. ಕುಟುಂಬದವರ ಜೊತೆ ಮಾತನಾಡುವುದನ್ನೇ ಮರೆತಿದ್ದೇವೆ. ಹೆತ್ತ ತಾಯಿಯ ಜೊತೆ ಮಾತನಾಡುವುದನ್ನು ಮರೆತಿದ್ದೇವೆ. ಸಮಾಜ ಸರಿ ದಿಕ್ಕಿಗೆ ಸಾಗಬೇಕಾದರೆ ಕುಟುಂ ಬಗಳಲ್ಲಿನ ಸಂಬಂಧಗಳು ಬಲವಾಗಬೇಕು ಎಂದರು.

# ವಾಹನ ದಂಡದ ಮಾಹಿತಿ ದೂರ

> **2017ಕ್ಕೂ ಹಳೆ ವಾಹನಗಳಿಗೆ ಮಾಲೀಕರೇ ಮೊಬೈಲ್ ಸಂಖ್ಯೆ ಅಪ್ಡೇಟ್ ಮಾಡಿಕೊಳ್ಳಬೇಕಿದೆ ಮೊಬೈಲ್ ಸಂಖ್ಯೆ ಬದಲಾದಾಗ ಅಪ್ಡೇಟ್ ಮಾಡಿಕೊಳ್ಳಲು ಅವಕಾಶ**

**(1ನೇ ಪುಟದಿಂದ)** ವಿಳಾಸ ಹಾಗೂ ಮೊಬೈಲ್ ಸಂಖ್ಯೆ ಪಡೆಯಲಾಗಿರುತ್ತದೆ. ಈ ವಾಹನಗಳು ಸಂಚಾರಿ ನಿಯಮ ಉಲ್ಲಂಘಿಸಿದಾಗ ಮೊಬೈಲ್ ಸಂಖ್ಯೆಗೆ ಮೆಸೇಜ್ ಹಾಗೂ ವಿಳಾಸಕ್ಕೆ ಅಂಚೆ ಪತ್ರದ ಮೂಲಕ ನೋಟಿಸ್ ಕಳಿಸಲಾಗುತ್ತಿದೆ.

ಆದರೆ, ಸಾಕಷ್ಟು ಜನರು ವಿಳಾಸ ಬದಲಿಸಿಕೊಂಡಿದ್ದಾರೆ. ಕೆಲವರು ಫೋನ್ ನಂಬರ್ ಸಹ ಬದಲಿಸಿಕೊಂಡಿರುತ್ತಾರೆ. ಹೀಗಾಗಿ ಇವರಿಗೆ ತಮ್ಮ ವಾಹನದ ಮೂಲಕ ಸಂಚಾರ ನಿಯಮ ಉಲ್ಲಂಘನೆಯಾಗಿರುವುದು ತಿಳಿದೇ ಇರುವುದಿಲ್ಲ.

ಅಲ್ಲದೇ, 2017ರ ನಂತರದ ನೋಂದಣಿಯಾದ ವಾಹನಗಳನ್ನು ಮಾತ್ರ ಸಂಬಂಧಿಸಿದ ಇಲಾಖೆಗಳು ಅವರ ಮೊಬೈಲ್ ಸಂಖ್ಯೆಗೆ ಜೋಡಣೆ ಮಾಡಿವೆ. ಅದಕ್ಕೂ ಹಿಂದೆ ನೋಂದಣಿಯಾದ ವಾಹನಗಳನ್ನು ಮೊಬೈಲ್ ಸಂಖ್ಯೆಗೆ ಜೋಡಣೆ ಮಾಡಲಾಗಿಲ್ಲ.

ಬಾಡಿಗೆ ಮನೆ ಬದಲಿಸಿದಾಗ ವಾಹನದ ನಿಯಮ ಉಲ್ಲಂಘನೆಯ ದಂಡದ ನೋಟಿಸ್ ಹಳೆಯ ಮನೆಗೆ ಹೋಗುತ್ತದೆ. ಕೆಲವರಂತೂ ಫೋನ್ ನಂಬರ್‌ಗಳನ್ನೂ ಬದಲಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಯಾರದೋ ವಾಹನ ಉಲ್ಲಂಘನೆಯ ಮೆಸೇಜ್ ಇನ್ಯಾರಿಗೋ ಹೋಗಿರುತ್ತದೆ.

ಈ ಸಮಸ್ಯೆ ಬಗೆಹರಿಸಲು ಆನ್‌ಲೈನ್ ಮೂಲಕ ವಾಹನಗಳ ನೋಂದಣಿ ಮಾಡಲು ವ್ಯವಸ್ಥೆ ಇದೆ. parivahan.gov.in ವೆಬ್ ತಾಣಕ್ಕೆ ಭೇಟಿ ನೀಡುವ ಮೂಲಕ ಮೊಬೈಲ್ ಸಂಖ್ಯೆ ಅಪ್ಡೇಟ್ ಮಾಡಿಕೊಳ್ಳಬಹುದು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ಶ್ರೀಧರ ಮಲ್ನಾಡ್ ತಿಳಿಸಿದ್ದಾರೆ.

ಈ ರೀತಿ ನೋಂದಣಿ ಮಾಡಿಕೊಳ್ಳುವಾಗ ಆಧಾರ್ ಕಾರ್ಡ್‌ನಲ್ಲಿರುವ ಹೆಸರು ಹಾಗೂ ಮಾಲೀಕರ ಹೆಸರು ಹೊಂದಾಣಿಕೆಯಾಗುವ ರೀತಿ ಇರಬೇಕು. ಆನ್‌ಲೈನ್ ಅಷ್ಟೇ ಅಲ್ಲದೇ, ನಮ್ಮ ಕಚೇರಿಗೆ ಬಂದರೂ ವಾಹನಗಳಿಗೆ ಮೊಬೈಲ್ ಸಂಖ್ಯೆಗಳ ನೋಂದಣಿ ಮಾಡಿಕೊಡುತ್ತೇವೆ ಎಂದವರು ಹೇಳಿದ್ದಾರೆ.

ವಾಹನಗಳ ಮಾಲೀಕರು ತಮ್ಮ ಮೊಬೈಲ್ ಸಂಖ್ಯೆ ಬದಲಿಸಿಕೊಂಡ ಸಂದರ್ಭದಲ್ಲೂ, ವಾಹನಗಳ ರಿಜಿಸ್ಟ್ರೇಷನ್‌ನಲ್ಲಿ ಅಪ್ಡೇಟ್ ಮಾಡುವುದು ಸೂಕ್ತ. ಇದಕ್ಕಾಗಿ parivahan.gov.in ತಾಣದಲ್ಲಿ ಅವಕಾಶ ಇದೆ. ಈ ರೀತಿ ವಾಹನಗಳು ನೋಂದಣಿ ಹಾಗೂ ಮೊಬೈಲ್ ಸಂಖ್ಯೆ ಅಪ್ಡೇಟ್ ಆಗಿದ್ದಾಗ, ಆನ್‌ಲೈನ್ ಮೂಲಕವೇ ಇ-ಚಲನ್ ಪಡೆಯಲು ಸಾಧ್ಯವಾಗುತ್ತದೆ ಎಂದು ಆರ್.ಟಿ.ಒ. ಮಲ್ನಾಡ್ ವಿವರಿಸಿದ್ದಾರೆ.

